**ಸಿಸಿ ಃ 735/2021**

**ಚಾಸಾ –2**

**ಪ್ರಾಸಾ –2**

ಸಾಕ್ಷಿಯು ಕ್ರಮವಾಗಿ ಪ್ರಮಾಣೀಕರಿಸಿದ ದಿನಾಂಕಃ 04-06-2024

ಪಾಟಿ ಸವಾಲುಃ ಶ್ರೀ. ಹೆಚ್.ಈ.ಪಿ ವಕೀಲರಿಂದ

ನಾನು ವಿದ್ಯಬ್ಯಾಸ ಮಾಡಿಲ್ಲ. ಅಪಘಾತದ ನಂತರ ನಾನು ಸೋಮವಾರಪೇಟೆ ಠಾಣೆಗೆ ಹೋಗಿ ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ಅಪಘಾತ 25 ನೇ ಮೇ 2021 ರಂದು ಆಗಿರುತ್ತದೆ. ಆ ಸಮಯದಲ್ಲಿ ದೇಶಾದ್ಯಂತ ಕರೋನ ದಿಂದ ಲಾಕ್ ಡೌನ್ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಸರ್ಕಾರದ ವತಿಯಿಂದ ಯಾವುದೇ ಸಾರ್ವಜನಿಕರು ಸ್ವತಂತ್ರವಾಗಿ ಹೊರಗಡೆ ಓಡಾಡಲು ನಿರ್ಬಂಧ ಇತ್ತು ಎಂದರೆ ಸರಿ. ತುರ್ತು ಪರಿಸ್ಥಿತಿ ಇದ್ದಲ್ಲಿ ಮಾತ್ರ ಜಿಲ್ಲಾಧಿಕಾರಿಯಿಂದ / ಸಂಬಂಧಿಸಿದ ಇಲಾಖೆಯಿಂದ ಹೊರಗಡೆ ಹೋಗಲು ಅನುಮತಿ ಪಡೆಯಬೇಕು ಎಂದರೆ ಸರಿ. ನನನ ಮಗಳು ಗಂಡನ ಜೊತೆ ಜಗಳ ಮಾಡಿಕೊಂಡು ನಮ್ಮ ಮನೆಗೆ ಬಂದಿರುತ್ತಾರೆ, ನಾವು ನನ್ನ ಮಗಳ ಗಂಡನ ಮನೆಗೆ ಅವಳನ್ನು ಬಿಡಲು ಹೋಗಲಿಲ್ಲ. ನನ್ನ ನಾದಿನಿ ಮನೆಗೆ ಪ್ರಯಾಣ ಮಾಡುತ್ತಿದ್ದೇವು. ನಾನು ಮತ್ತು ನನ್ನ ಗಂಡ ಅನುಮತಿ ಪಡೆದು ಹೋಗಲಿಲ್ಲ.

ಈಶ್ವರ್ ನನ್ನ ದೂರದ ಸಂಬಂಧಿಯಾಗಿರುತ್ತಾರೆ. ನಾವು ಹೋಗುತ್ತಿದ್ದ ಆಟೋ ಬಾಡಿಗೆ ಆಟೋ ಎಂದರೆ ಸರಿ. ಈಶ್ವರ್ ದೊಡ್ಡತ್ತೂರು ಗ್ರಾಮದಲ್ಲಿ ಆಟೋ ಚಲಾಯಿಸುತ್ತಿದ್ದರು ಎಂದರೆ ಸರಿ. ಬಾಡಿಗೆ ಚಲಾಯಿಸುವ ಆಟೋದವರಿಗೆ ಪರವಾನಿಗೆ ಪಡೆದ ಸ್ಥಳದಿಂದ 15 ಕಿಲೋ ಮೀಟರ್ ವ್ಯಾಪ್ತಿ ಹೊರಗಡೆ ಹೋಗುವ ಅವಕಾಶ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಮನೆ ಕುಶಾಲನಗರದ ಗೌಡ

ಸಮಾಜದ ಬಳಿ ಇದೆ. ಕುಶಾಲನಗರದಿಂದ ಬೆಂಬಲೂರು ಗ್ರಾಮಕ್ಕೆ ಕೂಡಿಗೆ, ಹೆಬ್ಬಾಳೆ, ಸಿದ್ದಲಿಂಗಪುರ, ಬಾಣವಾರ ಮಾಲಂಬಿ, ಶನಿವಾರಸಂತೆ ಮಾರ್ಗವಾಗಿ ಹೋಗಬೇಕು ಎಂದರೆ ಸರಿ. ಆ ಮಾರ್ಗವಾಗಿ ಮೇ 2021 ರಲ್ಲಿ ವಾಹನ ಚಲಾವನೆ ಮಾಡಲು ಅವಕಾಶ ಕೊಡುತ್ತಿರಲಿಲ್ಲ ಎಂದರೆ ಸರಿ. ನಾವು ಸೋಮವಾರಪೇಟೆ ಒಳ ಮಾರ್ಗವಾಗಿ ಪೊಲೀಸರಿಗೆ ಗೊತ್ತಾಗದ ರೀತಿ ಹೋಗಿರುತ್ತೇವೆ. ಕುಶಾಲನಗರದಿಂದ ಹೊರಟು ಗಣಗೂರು ತಲುಪುವರೆಗೆ ನಾವು ಪೊಲೀಸರನ್ನು ಭೇಟಿ ಮಾಡಲಿಲ್ಲ. ನಾವು ಪ್ರಯಾಣಿಸುತ್ತಿದ್ದ ಆಟೋ 3 ಚಕ್ರದ ಆಟೋ. ನಾವು 3 ಜನ ಕೂರುವಂತಹ ಆಟೋದಲ್ಲಿ ಹೋಗಿರುತ್ತೇವೆ. ಮೃತ ಭುವನ್ ಗೆ 15 ವರ್ಷ ವಯಸ್ಸು, ಧನುಷ್ ರವರಿಗೆ 14 ವರ್ಷ ವಯಸ್ಸು. ಆ ಆಟೋದಲ್ಲಿ ನಾನು, ನನ್ನ ಗಂಡ, ನನ್ನ ಮಗಳು, ನನ್ನ ಇಬ್ಬರು ಮೊಮಕ್ಕಳು, ಆಟೋ ಚಾಲಕ ಹೋಗುತ್ತಿದ್ದೇವು.

ಆಟೋ ಹಿಂಭಾಗದಲ್ಲಿ ಬಲಭಾಗದಲ್ಲಿ ನಾನು ಕೂತಿದ್ದೆ, ನನ್ನ ಪಕ್ಕ ಭುವನ, ಅವರ ಪಕ್ಕ ನನ್ನ ಮಗಳು ಅವರ ಪಕ್ಕ ನನ್ನ ಗಂಡ ಕುಳಿತಿದ್ದರು. ನಮ್ಮ ಆಟೋಗೆ ಮುಖಾ ಮುಖಿಯಾಗಿ ಡಿಕ್ಕಿ ಪಡಿಸಿರುತ್ತಾರೆ. ಎದುರುಗಡೆಯಿಂದ ಬಂದ ವಾಹನ ಬಹಳ ರಭಸವಾಗಿ ಬಂದು ಅಪ್ಪಳಿಸಿರುತ್ತದೆ. ಆಗ ನಮ್ಮ ವಾಹನ ಎಡ ಭಾಗಕ್ಕೆ ಪಲ್ಟಿಯಾಗಿರುತ್ತದೆ. ನನ್ನ ಗಂಡನ ಹೆಸರು ರಾಜು ಅವರು ಎಡ ಭಾಗದಲ್ಲಿ ಕುಳಿತಿದ್ದರು. ಆಟೋ ಬಿದ್ದಿರುವುದು ಗೊತ್ತಾಗಿರುತ್ತದೆ ಎಷ್ಟು ಪಲ್ಟಿಯಾಯಿತು ಎಂದು ಗೊತ್ತಿಲ್ಲ. ಆಟೋ ಮುಗಿ,ದಾಗ ಒಬ್ಬರ ಮೇಲೆ ಒಬ್ಬರು ಬಿದ್ದಿರುತ್ತೇವೆ. ನನ್ನ ಗಂಡನಿಗೆ ಗಾಯ

ಸಿಸಿ ಃ 735/2021

**ಚಾಸಾ –2**

**ಪ್ರಾಸಾ –2**

ಆಗಿಲ್ಲ, ನನಗೆ ಮತ್ತು ಮಗುವಿಗೆ ಆಗಿರುತ್ತದೆ. ಚಾಲಕನಿಗೆ ಯಾವುದೇ ಗಾಯ ಆಗಲಿಲ್ಲ. ಬಲಭಾಗದ ಆಟೋಗೆ ಕಬ್ಬಿಣದ ಗ್ರಿಲ್ಸ್ ಇತ್ತು. ಅದನ್ನು ಜನರು ಬೀಳಬಾರದು ಎಂದು ಆಗಿರುತ್ತಾರೆ ಎಂದರೆ ಸರಿ. ಆಟೋಗೆ ಎಡ ಭಾಗದಲ್ಲಿ ಡೋರ್ ಇರಲಿಲ್ಲ.

ನಾವು ಪ್ರಯಾಣಿಸುತ್ತಿದ್ದ ಆಟೋಗೆ ಮುಂದಿನ ಗಾಜು ಹೊಡೆದ ಬಗ್ಗೆ ನಾನು ನೋಡಿಲ್ಲ. ಸದರಿ ದಿನ ಮುಂಭಾಗ ಯಾವುದೇ ವಾಹನಗಳು ಇರಲಿಲ್ಲ. ಸದರಿ ದಿನ ಎದುರುಗಡೆಯಿಂದ ಬಂದಂತಹ ವಾಹನದ ನೊಂದಣಿ ಸಂಖ್ಯೆಯನ್ನು ತಿಳಿದುಕೊಂಡು ಹೇಳಿಲ್ಲ. ಎದುರುಬದಿ ವಾಹನ ಮತ್ತು ನಾವು ಹೋಗುತ್ತಿದ್ದ ವಾಹನಗಳ ನೊಂದಣಿ ಸಂಖ್ಯೆ ನಾನು ಹೇಳಿಲ್ಲ. ಅಪಘಾತ ಪಡಿಸಿದ ವಾಹನದಲ್ಲಿ ಎಷ್ಟು ಜನ ಇದ್ದರು ಎಂದು ನಾನು ನೋಡಿಲ್ಲ. ಆ ವಾಹನದ ಸಂಖ್ಯೆಯನ್ನು ಯಾರು ಹೇಳಿಕೊಟ್ಟಿಲ್ಲ. ನನಗೆ ಎದೆಗೆ ಮತ್ತು ಮೂಗಿಗೆ ಗಾಯ ಆಗಿರುತ್ತದೆ. ಭುವನ್ ಗೆ ಎಲ್ಲಿ ಗಾಯ ಆಗಿದೆ ಎಂದು ಗೊತ್ತಿಲ್ಲ ಆದರೆ ಬಾಯಲ್ಲಿ ರಕ್ತ ಬಂದಿರುತ್ತದೆ. ಅಪಘಾತ ಆದಾಗ ನನಗೆ ಸ್ವಲ್ಪ ಜ್ಞಾನ ತಪ್ಪಿತ್ತು. ಸಂಪೂರ್ಣ ಜ್ಞಾನ ತಕ್ಷಣ ಬಂದಿರುತ್ತದೆ. ಅಪಘಾತ ಆದ ಸ್ಥಳದಲ್ಲಿ ಮನೆಗಳು ಮತ್ತು ಶಾಲೆ ಇರುತ್ತದೆ.

ಆಗ ಅಕ್ಕ ಪಕ್ಕದ ವಾಸಿಗಳು ಅಂದಾಜು 20-30 ಜನ ಸೇರಿದ್ದರು. ಮಾಲಂಬಿಯಿಂದ ಗಣಗೂರು ಮಾರ್ಗವಾಗಿ ಗೋಣಿಮರೂರಿಗೆ ರಸ್ತೆ ಏರು ಮುಖವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತ ಆದ ಸ್ಥಳ ಹೇಗಿದೆ ಎಂದು ಗೊತ್ತಿಲ್ಲ. ಸದರಿ ರಸ್ತೆ ದೊಡ್ಡ ಅಗಳ ರಸ್ತೆ. ಎರಡು ದೊಡ್ಡ

ವಾಹನಗಳು ಸರಾಗವಾಗಿ ಹೋಗಲು ತುಂಬಾ ಜಾಗ ಇರುತ್ತದೆ. ನನಗೆ ರಕ್ತ ಗಾಯ ಆಗಿರುತ್ತದೆ. ಈಶ್ವರ್ ರವರಿಗೆ ವಾಹನ ಚಲಾವನೆ ಮಾಡಲು ಪರವಾನಿಗೆ ಇರಲಿಲ್ಲ ಎಂದರೆ ಸರಿ, ನಾವು ಪ್ರಯಾಣಿಸುತ್ತಿದ್ದ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಗೊತ್ತಿಲ್ಲ. ಅಪಘಾತ ಸಂಬಂಧ ಪರಿಹಾರ ಕೋರಿ ಹಾಸನದಲ್ಲಿ ಪ್ರಕರಣ ದಾಖಲು ಮಾಡಿರುತ್ತೇವೆ. ಈಶ್ವರ್ ರವರು ಅವರು ಚಲಾಯಿಸುತ್ತಿದ್ದ ವಾಹನದಲ್ಲಿ ಹೆಚ್ಚು ಜನರನ್ನು ಕೂರಿಸಿಕೊಂಡು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ ಅಪಘಾತ ಮಾಡಿದ್ದಾರೆ ಎಂದರೆ ಸರಿಯಲ್ಲ.

ನಾವು ಚಲಾಯಿಸುತ್ತಿದ್ದ ಆಟೋಗೆ ಕೇವಲ 3 ಜನರನ್ನು ಕರೆದುಕೊಂಡು ಹೋಗುವ ಸಾಮರ್ಥ್ಯ ಇದ್ದು ಚಾಸಾ 4 ಅತಿ ಹೆಚ್ಚು ಜನರನ್ನು ಕೂರಿಸಿಕೊಂಡು ಹೋಗಿ ಸ್ವಯಂ ಪ್ರೇರಿತವಾಗಿ ಅಪಘಾತ ಪಡಿಸಿದ್ದಾರೆ ಎಂದರೆ ಸರಿಯಲ್ಲ. ಚಾಸಾ 4 ರವರ ವಾಹಕ್ಕೆ ವಿಮೆ ಇಲ್ಲದ ಕಾರಣ ಮತ್ತು ಪರವಾನಿಗೆ ಇಲ್ಲದ ಕಾರಣ ಮತ್ತೊಂದು ವಾಹನದ ಮೇಲೆ ಪ್ರಕರಣ ದಾಖಲು ಮಾಡಿದರೆ ವಿಮೆ ಸಿಗುತ್ತದೆ ಎಂದು ಚಾಸಾ 4 ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾವಿದ್ದ ಆಟೋದಲ್ಲಿ ಬಲಭಾಗದಲ್ಲಿ ಕಬ್ಬಿಣದ ಗ್ರಿಲ್ ಇತ್ತು. ಅಪಘಾತದಲ್ಲಿ ಕಬ್ಬಿಣದ ಗ್ರಿಲ್ ಜಖಂ ಆದ ಬಗ್ಗೆ ನಾನು ನೋಡಿಲ್ಲ. ಆರೋಪಿ ಮತ್ತು ಅವರಿಗೆ ಸೇರಿದ ವಾಹನ ಯಾವುದೇ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ಚಾಸಾ 4 ರವರ ಮಾತನ್ನು ಕೇಳಿ ಪ್ರಕರಣ ದಾಖಲು ಮಾಡಿ ವಿಮೆ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ರಸ್ತೆ ಅಪಘಾತ ಪರಿಹಾರ ಕೋರಿ ಹಾಸನದಲ್ಲಿ ಪ್ರಕರಣ ದಾಖಲು ಮಾಡಿರುತ್ತೇವೆ. ಅಪಘಾತ ಸ್ಥಳದಲ್ಲಿ ರಸ್ತೆ ನೇರವಾಗಿ ಇತ್ತು. ಅಪಘಾತ ಸ್ಥಳದ ರಸ್ತೆ

**ಸಿಸಿ ಃ 735/2021**

**ಚಾಸಾ –2**

**ಪ್ರಾಸಾ –2**

ಎರಡು ವಾಹನಗಳು ಚಲಾಯಿಸುವ ರಸ್ತೆ ಆಗಿರುತ್ತದೆ. ಬೃಹತ್ ವಾಹನಗಳು ಅತಿವೇಗವಾಗಿ ಬಂದರೂ ಸುಲಭವಾಗಿ ಚಲಾಯಿಸಬಹುದು. ನನ್ನ ಮಗ ಮೃತ ಪಡಲು ಯಾವ ಸ್ಥಳಕ್ಕೆ ಗಾಯ ಆಗಿ ನಿಖರ ಕಾರಣ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿಲ್ಲ. ಅಪಘಾತ ಆದಾಗ ನನ್ನ ಮಗ ವಾಹನದ ಹೊರಗೆ ಬಿದ್ದಿದ್ದ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಶ್ವರ ರವರು ಮಾಡಿದ ಅಪಘಾತಕ್ಕೆ ಅವರನ್ನು ಬಚಾವ್ ಮಾಡಲು ಮತ್ತು ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.
ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

ಸಹಿ/-

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ